# ಶಿವಳ್ಳಿ ಸಭಾ (ರಿ.) ಮಂಗಳೂರು

(Reg. No. DRDK/SOR/84/2025-2026)
'ಶ್ರೀಹರ್ಷ', ಜ್ಯೋತಿ ಗ್ಯಾರೇಜ್‌ನ ಎದುರುಗಡೆ, ಟೈಲರಿ ರಸ್ತೆ, ಮುಳಿಹಿತ್ಲು, ಬೋಳಾರ, ಮಂಗಳೂರು - 575 001.
ಮೊಬೈಲ್ : 9844213737, 9740937924 ಇಮೈಲ್ : shivalli.sabha@gmail.com

## ಮಹಾಸಭೆಯ ತಿಳುವಳಿಕೆ ಪತ್ರ

**2025–2026**

# Shivalli Sabha (R) Mangalore

'Sri Harsha', Opp. Jyothi Garaje, Tailory Road,
Mulihithlu, Bolara, Mangalore.

## General Body Meeting Notice

**2025–2026**

ರಿಗೆ,..........................................................................

..........................................................................

..........................................................................

# ಶಿವಳ್ಳಿ ಸಭಾ (ರಿ.) ಮಂಗಳೂರು

(Reg. No. DRDK/SOR/84/2025-2026)
'ಶ್ರೀಹರ್ಷ', ಜ್ಯೋತಿ ಗ್ಯಾರೇಜ್‌ನ ಎದುರುಗಡೆ, ಟೈಲರಿ ರಸ್ತೆ, ಮುಳಿಹಿತ್ಲು, ಬೋಳಾರ, ಮಂಗಳೂರು - 575 001.
ಮೊಬೈಲ್ : 9844213737, 9740937924 ಇಮೈಲ್ : shivalli.sabha@gmail.com

**<u>ವಾರ್ಷಿಕ ಮಹಾಸಭೆಯ ತಿಳುವಳಿಕೆ ಪತ್ರ</u>**

ಮಂಗಳೂರು
18.09.2026

ಆತ್ಮೀಯರೇ,

ಇದೇ ಬರುವ **ತಾರೀಕು 4.10.2026 ರಂದು ಆದಿತ್ಯವಾರ ಅಪರಾಹ್ನ ಗಂಟೆ 3.00ಕ್ಕೆ** ಸರಿಯಾಗಿ ನಮ್ಮ ಸಂಘದ **ವಾರ್ಷಿಕ ಮಹಾಸಭೆಯು** ಶಾರದಾ ವಿದ್ಯಾಲಯ ಮಂಗಳೂರು ಇಲ್ಲಿ ನಡೆಯಲಿದೆ. ತಾವೆಲ್ಲರೂ ಸಕಾಲದಲ್ಲಿ ಆಗಮಿಸಿ, ಸಲಹೆ ಸೂಚನೆಗಳನ್ನು ನೀಡಿ ಸಭೆಯನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿ.

**<u>ಕಾರ್ಯಸೂಚಿ</u>**

1. ಆಸನ ಸ್ವೀಕಾರ
2. ಪ್ರಾರ್ಥನೆ
3. ಸ್ವಾಗತ
4. ಶ್ರದ್ಧಾಂಜಲಿ
5. ಗತ ವರ್ಷದ ಸಂಘದ ಚಟುವಟಿಕೆಗಳ ಹಾಗೂ ಕಾರ್ಯಕಲಾಪಗಳ ವರದಿ ಮಂಡನೆ – ಅನುಮೋದನೆ
6. 2025–26 ರ ಅವಧಿಯ ವಾರ್ಷಿಕ ಲೆಕ್ಕಪತ್ರ ಮಂಡನೆ – ಅನುಮೋದನೆ
7. ನೂತನ ಪದಾಧಿಕಾರಿಗಳ ಆಯ್ಕೆ / ಅನುಮೋದನೆ
8. ಲೆಕ್ಕ ಪರಿಶೋಧಕರ ಮುಂದುವರಿಕೆಗೆ – ಅನುಮೋದನೆ
9. ಮುಂದಿನ ವರ್ಷದ ಅಂದಾಜು ಆಯ ವ್ಯಯ ಮಂಡನೆ
10. ಇತರ ವಿಷಯ – ಅಧ್ಯಕ್ಷರ ಅನುಮತಿಯ ಮೇರೆಗೆ
11. ಅಧ್ಯಕ್ಷರ ಭಾಷಣ
12. ಧನ್ಯವಾದ ಸಮರ್ಪಣೆ
13. ರಾಷ್ಟ್ರಗೀತೆ.
14. ಜಾದೂ ಪ್ರದರ್ಶನ
15. ಉಪಹಾರ

| **ಬಿ. ಉದಯಶಂಕರ** | **ಪ್ರಸನ್ನ ರಾವ್** | **ಭಾಸ್ಕರ ಭಟ್** |
|---|---|---|
| **ಅಧ್ಯಕ್ಷರು** | **ಖಜಾಂಚಿ** | **ಕಾರ್ಯದರ್ಶಿ** |

**ಹಾಗೂ ಆಡಳಿತ ಮಂಡಳಿ ಸದಸ್ಯರು**

# ಶಿವಳ್ಳಿ ಸಭಾ (ರಿ.) ಮಂಗಳೂರು

## ಕಾರ್ಯಕಲಾಪಗಳ ವರದಿ (2025–2026)

### 1. ನೂತನ 'ಶಿವಳ್ಳಿ ಸಭಾ (ರಿ.)' ಸಂಘಟನೆಯ ಉದಯ (14–04–2025)

ನಮ್ಮ–ನಿಮ್ಮೆಲ್ಲರ 'ಶಿವಳ್ಳಿ ಸಭಾ' ದಿನಾಂಕ 14–04–2025ರಂದು ಕೊಡಿಯಾಲ್‌ಬೈಲಿನ ಶಾರದಾ ವಿದ್ಯಾಲಯದಲ್ಲಿ ಎಲ್ಲಾ ವಲಯಗಳ ಶಿವಳ್ಳಿ ಬಾಂಧವರ ಸಮಕ್ಷಮದಲ್ಲಿ ವಿಧ್ಯುಕ್ತವಾಗಿ ಪ್ರಾರಂಭವಾಯಿತು. ದುರ್ಗಾಂಬಾ ದೇವಸ್ಥಾನದ ಪ್ರಧಾನ ಅರ್ಚಕರಾದ ಶ್ರೀ ಲಕ್ಷ್ಮೀನಾರಾಯಣ ಭಟ್ ಅವರು ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ಅತಿಥಿಗಳಾಗಿ ಶ್ರೀ ಬಾಳ ಭಾಸ್ಕರ ರಾವ್, ಪಾವಂಜೆಯ ಶ್ರೀ ಸತೀಶ್ ಭಟ್, ಅಶೋಕನಗರದ ಶ್ರೀ ವ್ಯಾಸಪ್ರಸಾದ್ ಹಾಗೂ ಸುರತ್ಕಲ್ಲಿನ ಶ್ರೀ ಕೃಷ್ಣರಾಜ ಭಟ್ ಉಪಸ್ಥಿತರಿದ್ದರು.

ಶ್ರೀ ಗಣೇಶ ಹೆಬ್ಬಾರ್ ಅವರು ನೂತನ ಸಂಘದ ಅನಿವಾರ್ಯತೆಯನ್ನು ವಿವರಿಸಿದರು. ಸಮಾಜವು ಸಂಘಟನಾ ಸೇವೆಯಿಂದ ವಂಚಿತವಾಗಬಾರದು ಎಂಬ ಉದ್ದೇಶದಿಂದ ಸರ್ವ ಸದಸ್ಯರ ಒಮ್ಮತದ ಮೇರೆಗೆ ನೂತನ ಸಂಘವನ್ನು ಸ್ಥಾಪಿಸಿ, ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

| | | |
|---|---|---|
| ಅಧ್ಯಕ್ಷರು | : | **ಬಿ. ಉದಯಶಂಕರ್** |
| ಉಪಾಧ್ಯಕ್ಷರು | : | **ಪ್ರೇಮನಾಥ್ ರಾವ್, ಅರುಣ್ ರಾವ್** |
| ಕಾರ್ಯದರ್ಶಿ | : | **ಭಾಸ್ಕರ್ ಭಟ್ (ಮಂಗಳಾದೇವಿ)** |
| ಜೊತೆ ಕಾರ್ಯದರ್ಶಿಗಳು | : | **ರವೀಶ್ ನಾರ್ಷ, ಗಿರೀಶ್ ಭಟ್** |
| ಕೋಶಾಧಿಕಾರಿ | : | **ಪ್ರಸನ್ನ ರಾವ್** |

ನಂತರ ಸೆಪ್ಟೆಂಬರ್ 3ರಂದು ಬೈಲಾ (Byelaw) ನೋಂದಣಿಯಾದ ಬಳಿಕ, ಪ್ಯಾನ್ ಕಾರ್ಡ್ (PAN), ದರ್ಪಣ್ (Darpan) ನೋಂದಣಿ ಮಾಡಿಸಿ, ಕರ್ನಾಟಕ ಬ್ಯಾಂಕಿನ ಕಾರ್‌ಸ್ಟ್ರೀಟ್ ಶಾಖೆಯಲ್ಲಿ ಸಂಘದ ನೂತನ ಬ್ಯಾಂಕ್ ಖಾತೆಯನ್ನು ತೆರೆಯಲಾಯಿತು.

### 2. ಬ್ರಾಹ್ಮಣ ಸಮಾಜದ ಪರವಾಗಿ ಪ್ರತಿಭಟನಾ ಜಾಥಾದಲ್ಲಿ ಭಾಗಿ (22–04–2025)

ಸಿಇಟಿ (CET) ಪರೀಕ್ಷಾ ಕೇಂದ್ರಗಳಲ್ಲಿ ವಿದ್ಯಾರ್ಥಿಗಳ ಜನಿವಾರ ತೆಗೆಸಿದ ಘಟನೆಯನ್ನು ಖಂಡಿಸಿ, ಬ್ರಾಹ್ಮಣ ಸಂಘಗಳು ಶರವು ದೇವಸ್ಥಾನದಿಂದ ಕ್ಲಾಕ್ ಟವರ್‌ವರೆಗೆ ಆಯೋಜಿಸಿದ್ದ ಬೃಹತ್ ಪ್ರತಿಭಟನಾ ಜಾಥಾದಲ್ಲಿ ಶಿವಳ್ಳಿ ಸಭಾದ ನೂರಕ್ಕೂ ಹೆಚ್ಚು ಬಾಂಧವರು ಸಕ್ರಿಯವಾಗಿ ಪಾಲ್ಗೊಂಡರು. ಪ್ರತಿಭಟನಾ ಫಲಕ ಹಾಗೂ ಬ್ಯಾನರ್ ಹಿಡಿದು ಘೋಷಣೆಗಳನ್ನು ಕೂಗುತ್ತಾ, ಸಮಗ್ರ ಬ್ರಾಹ್ಮಣ ಸಮಾಜಕ್ಕೆ ಶಿವಳ್ಳಿ ಸಭಾದ ಬದ್ಧತೆಯನ್ನು ಪ್ರದರ್ಶಿಸಲಾಯಿತು.

**3. ತ್ರಿಮತಸ್ಥ ಬ್ರಾಹ್ಮಣರ ಬೃಹತ್ ವೇದ ಶಿಬಿರ (26–04–2025 ರಿಂದ 09–05–2025)**

ಕಾಪೂರಿನ ಶ್ರೀ ರಾಘವೇಂದ್ರ ಮಠದಲ್ಲಿ ಉಡುಪಿ ಪಲಿಮಾರು ಮಠಾಧೀಶರ ದಿವ್ಯ ಆಶೀರ್ವಾದದೊಂದಿಗೆ 14 ದಿನಗಳ ಕಾಲ ಯಶಸ್ವಿ ವೇದ ಶಿಬಿರವನ್ನು ಆಯೋಜಿಸಲಾಗಿತ್ತು. ಒಟ್ಟು 68 ವಿದ್ಯಾರ್ಥಿಗಳು (49 ಬಾಲಕರು ಹಾಗೂ 19 ಬಾಲಕಿಯರು) ಪಾಲ್ಗೊಂಡಿದ್ದರು. ಸಂಧ್ಯಾವಂದನೆ, ವೇದ, ವಿಷ್ಣು ಸಹಸ್ರನಾಮ ಪಾರಾಯಣ, ಲಕ್ಷ್ಮೀ ಶೋಭಾನೆ, ಸಂಸ್ಕೃತ, ಭಜನೆ ಹಾಗೂ ಯೋಗ ಮುಂತಾದ ವಿಷಯಗಳನ್ನು ಕಲಿಸಿಕೊಡಲಾಯಿತು. ಮೇ 09ರಂದು ನಡೆದ ಸಮಾರೋಪದಲ್ಲಿ ದೇರೆಬೈಲಿನ ಶ್ರೀ ನವೀನ್ ಚಂದ್ರ ಭಟ್ ಅವರು ವಿದ್ಯಾರ್ಥಿಗಳಿಗೆ ಉಚಿತ ಶೈಕ್ಷಣಿಕ ಪರಿಕರಗಳನ್ನು ವಿತರಿಸಿದರು.

**4. ಪ್ರತಿಭಾ ಪುರಸ್ಕಾರ – 2025 (17–08–2025)**

ಶರವು ಶ್ರೀ ಮಹಾಗಣಪತಿ ದೇವಸ್ಥಾನದ ಸಭಾಭವನದಲ್ಲಿ 'ಪ್ರತಿಭಾ ಪುರಸ್ಕಾರ 2025' ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಅಶೋಕನಗರ, ಕುಡುಪು, ದೇರೆಬೈಲು, ಪಾವಂಜೆ, ಕದ್ರಿ ಹಾಗೂ ಮಂಗಳಾದೇವಿ ವಲಯಗಳ ಸದಸ್ಯರಿಂದ ಸಾಂಸ್ಕೃತಿಕ ಕಾರ್ಯಕ್ರಮ ಜರುಗಿತು (ನಿರೂಪಣೆ: ಶ್ರೀ ರವೀಶ್ ನಾರ್ಷ).

10ನೇ ಹಾಗೂ 12ನೇ ತರಗತಿಯಲ್ಲಿ ಅತ್ಯುತ್ತಮ ಸಾಧನೆಗೈದ 36 ವಿದ್ಯಾರ್ಥಿಗಳಿಗೆ, ಅವರ ಹೆತ್ತವರ ಸಮ್ಮುಖದಲ್ಲಿ ತಲಾ ₹ 3,000 ಪ್ರೋತ್ಸಾಹ ಧನ, ಸ್ಮರಣಿಕೆ ಹಾಗೂ ಶಾಲು ಹೊದಿಸಿ ಸನ್ಮಾನಿಸಲಾಯಿತು (ಕಾರ್ಯಕ್ರಮ ನಿರ್ವಹಣೆ: ಶ್ರೀ ಗಣೇಶ ಹೆಬ್ಬಾರ್). ಅತಿಥಿಗಳಾಗಿ ಶರವು ಕ್ಷೇತ್ರದ ಶ್ರೀ ರಾಘವೇಂದ್ರ ಶಾಸ್ತ್ರಿಗಳು, ಕಟೀಲು ಕ್ಷೇತ್ರದ ಶ್ರೀ ಹರಿನಾರಾಯಣ ದಾಸ ಆಸ್ರಣ್ಣರು, ಎಕ್ಸ್‌ಪರ್ಟ್ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಸುಬ್ರಹ್ಮಣ್ಯ ಉಡುಪ ಹಾಗೂ ಯೋಗ ಶಿಕ್ಷಕಿ ಶ್ರೀಮತಿ ಸುಶೀಲಾ ಕುಮಾರಿ ಆಗಮಿಸಿ ಹಿತವಚನ ನೀಡಿದರು. 300ಕ್ಕೂ ಹೆಚ್ಚು ಮಂದಿ ಪಾಲ್ಗೊಂಡಿದ್ದರು.

**5. ಕಟೀಲು ಕ್ಷೇತ್ರದಲ್ಲಿ ನವರಾತ್ರಿ ಅನ್ನಪ್ರಸಾದ ಸೇವೆ (22–09–2025 ರಿಂದ 02–10–2025)**

ನವರಾತ್ರಿ ಮಹೋತ್ಸವದ ಪ್ರಯುಕ್ತ ಕಟೀಲು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದಲ್ಲಿ ಜರುಗಿದ ಜಾತ್ರೆಯಲ್ಲಿ, ದಿನಕ್ಕೊಂದು ವಲಯದಂತೆ ಸಂಘದ ಎಲ್ಲಾ ವಲಯಗಳ ಸದಸ್ಯರು ಭಕ್ತಾದಿಗಳಿಗೆ ಅನ್ನಪ್ರಸಾದ ಬಡಿಸುವ ವಿಶಿಷ್ಟ ಕೈಂಕರ್ಯದಲ್ಲಿ ಶ್ರದ್ಧೆಯಿಂದ ಸೇವೆ ಸಲ್ಲಿಸಿದರು.

**6. ಲೋಕಕಲ್ಯಾಣಾರ್ಥ ಸಾಮೂಹಿಕ ಚಂಡಿಕಾಯಾಗ (23–11–2025)**

ತಲಪಾಡಿಯ ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದಲ್ಲಿ ಶಿವಳ್ಳಿ ಸಭಾ ವತಿಯಿಂದ ಸಾಮೂಹಿಕ ಚಂಡಿಕಾಯಾಗ ನೆರವೇರಿತು. ತಲಪಾಡಿಯ ವೇ.ಮೂ. ವಿಷ್ಣುಮೂರ್ತಿ ಭಟ್ ಅವರ ಪೌರೋಹಿತ್ಯದಲ್ಲಿ ನಡೆದ ಯಾಗದಲ್ಲಿ, ಶ್ರೀ ಸುದರ್ಶನ ಬನ್ನಿಂತಾಯರು 500ಕ್ಕೂ ಹೆಚ್ಚು ಭಕ್ತರಿಗೆ ಸಂಕಲ್ಪ ನೆರವೇರಿಸಿದರು. ಪೂರ್ಣಾಹುತಿ ಮತ್ತು ಮಹಾಪೂಜೆಯ ಬಳಿಕ 750ಕ್ಕೂ ಹೆಚ್ಚು ಭಕ್ತರು ಅನ್ನಪ್ರಸಾದ ಸ್ವೀಕರಿಸಿದರು.

**7. 2026ರ ನೂತನ ಕ್ಯಾಲೆಂಡರ್ ಬಿಡುಗಡೆ (01–12–2025)**

ಸಂಘದ ವತಿಯಿಂದ ಮುದ್ರಿಸಲಾದ 2026ನೇ ಸಾಲಿನ ಬಹುವರ್ಣೀಯ ಕ್ಯಾಲೆಂಡರ್ ಅನ್ನು ಉರ್ವದ ಶ್ರೀ ಪಂಚಲಿಂಗೇಶ್ವರ ದೇವಸ್ಥಾನದಲ್ಲಿ ಪ್ರಧಾನ ಅರ್ಚಕರಾದ ಶ್ರೀ ರಮೇಶ್ ತಂತ್ರಿ ಹಾಗೂ ಜ್ಯೋತಿಷಿ ಶ್ರೀ ನವೀನ್ ಚಂದ್ರ ಭಟ್ ಅವರು ಬಿಡುಗಡೆಗೊಳಿಸಿದರು. ಹೊಸ ವರ್ಷದ ಆರಂಭಕ್ಕೂ ಮುನ್ನವೇ ಎಲ್ಲಾ ವಲಯಗಳ ಸಹಕಾರದೊಂದಿಗೆ ಈ ಕ್ಯಾಲೆಂಡರ್ ಅನ್ನು ಪ್ರತಿಯೊಂದು ಮನೆಗೂ ತಲುಪಿಸಲಾಯಿತು.

**8. ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀಪಾದರ ಸಂಸ್ಮರಣಾರ್ಥ ರಕ್ತದಾನ ಶಿಬಿರ (28–12–2025)**

ಪದ್ಮವಿಭೂಷಣ ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀಪಾದರ ಸಂಸ್ಮರಣಾರ್ಥವಾಗಿ ಶಾರದಾ ವಿದ್ಯಾಲಯದಲ್ಲಿ ಅಶೋಕನಗರ ವಲಯದ ಸಹಭಾಗಿತ್ವದಲ್ಲಿ ರಕ್ತದಾನ ಶಿಬಿರವನ್ನು ಆಯೋಜಿಸಲಾಗಿತ್ತು. ಶ್ರೀ ಎಂ. ಬಿ. ಪುರಾಣಿಕ್ ಉದ್ಘಾಟಿಸಿದ ಈ ಕಾರ್ಯಕ್ರಮದಲ್ಲಿ ಉದ್ಯಮಿ ಶ್ರೀ ದಾಮೋದರ ಭಟ್ ಹಾಗೂ ಕಲ್ಕೂರ ಪ್ರತಿಷ್ಠಾನದ ಅಧ್ಯಕ್ಷರಾದ ಶ್ರೀ ಪ್ರದೀಪ ಕುಮಾರ್ ಕಲ್ಕೂರ ಭಾಗವಹಿಸಿದ್ದರು. 150ಕ್ಕೂ ಹೆಚ್ಚು ಮಂದಿ ಪಾಲ್ಗೊಂಡಿದ್ದ ಈ ಶಿಬಿರದಲ್ಲಿ 60ಕ್ಕೂ ಹೆಚ್ಚು ಬಾಂಧವರು ರಕ್ತದಾನ ಮಾಡಿದರು.

**9. ಶಿರೂರು ಮಠಾಧೀಶರಿಗೆ ಗುರುವಂದನಾ ಕಾರ್ಯಕ್ರಮ (04–01–2026)**

ಕಾವೂರಿನ ಶ್ರೀ ರಾಘವೇಂದ್ರ ಮಠದಲ್ಲಿ, ಪರ್ಯಾಯ ಪೀಠವೇರಲಿರುವ ಶಿರೂರು ಮಠಾಧೀಶರಾದ ಶ್ರೀ ಶ್ರೀ ವೇದವರ್ಧನ ತೀರ್ಥ ಶ್ರೀಪಾದರಿಗೆ ಗುರುವಂದನಾ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಶ್ರೀಗಳನ್ನು ವೇದಘೋಷ ಹಾಗೂ ಪೂರ್ಣಕುಂಭದೊಂದಿಗೆ ಸ್ವಾಗತಿಸಲಾಯಿತು. ಶಿವಳ್ಳಿ ಸಭಾದ 10 ವಲಯಗಳಿಂದಲೂ ಪ್ರತ್ಯೇಕವಾಗಿ ಶ್ರೀಗಳಿಗೆ ತುಳಸಿ ಮಾಲೆ ಹಾಗೂ ಫಲವಸ್ತುಗಳನ್ನು ಸಮರ್ಪಿಸಲಾಯಿತು. ವಿವಿಧ ವಲಯಗಳಿಂದ ಭಜನಾ ಸೇವೆ ಹಾಗೂ ವಿಷ್ಣು ಸಹಸ್ರನಾಮ ಪಠಣ ಜರುಗಿತು. ಶ್ರೀಗಳಿಗೆ ಪಾದಪೂಜೆ ನೆರವೇರಿಸಿ ₹ 50,000 ಗುರುಕಾಣಿಕೆ ಸಮರ್ಪಿಸಲಾಯಿತು. 250ಕ್ಕೂ ಹೆಚ್ಚು ಸದಸ್ಯರು ಇದರಲ್ಲಿ ಪಾಲ್ಗೊಂಡಿದ್ದರು.

***10. ಸ್ಮರಣೀಯ ಕ್ರೀಡೋತ್ಸವ – 2026 (ಜನವರಿ 10–11, 2026)**

ಚಿತ್ರಾಪುರ ಮಠದ ಶ್ರೀಗಳ ದಿವ್ಯ ಹಸ್ತದಿಂದ ಉದ್ಘಾಟನೆಗೊಂಡ ಈ ಬೃಹತ್ ಕ್ರೀಡೋತ್ಸವವು, ಸದಸ್ಯರ ಸಹಕಾರದಿಂದ ಒಂದು 'ಉತ್ಸವ'ದಂತೆ ಮೂಡಿಬಂತು. ಕಟೀಲಿನ ಶ್ರೀ ಹರಿನಾರಾಯಣ ಆಸ್ರಣ್ಣರು ಮಧ್ಯಾಹ್ನ ಅನ್ನಪ್ರಸಾದ ಒದಗಿಸಿದರೆ, ಇತರ ಬಾಂಧವರು ಉಪಹಾರ, ಐಸ್–ಕ್ರೀಮ್, ಮಜ್ಜಿಗೆ ಮುಂತಾದವುಗಳನ್ನು ಸೇವಾ ರೂಪದಲ್ಲಿ ನೀಡಿದರು. ಕ್ರೀಡೋತ್ಸವ ಸಮಿತಿಯ ಅಧ್ಯಕ್ಷರಾದ ಶ್ರೀ ಸತೀಶ್ ಭಟ್ ಹಾಗೂ ಶ್ರೀ ಬಾಳ ಭಾಸ್ಕರ್ ರಾವ್ ಅವರ ವ್ಯವಸ್ಥಾಪನಾ ಶ್ರಮ ಕಾರ್ಯಕ್ರಮದ ಯಶಸ್ಸಿಗೆ ಕಾರಣವಾಯಿತು.

**11. ಶಿರೂರು ಪರ್ಯಾಯಕ್ಕೆ ಹೊರೆಕಾಣಿಕೆ ಸಮರ್ಪಣೆ (15–01–2026)**

ಶಿರೂರು ಶ್ರೀಗಳ ಪರ್ಯಾಯ ಮಹೋತ್ಸವದ ಪ್ರಯುಕ್ತ ಶಿವಳ್ಳಿ ಸಭಾ ವತಿಯಿಂದ ₹77,000ಕ್ಕೂ ಹೆಚ್ಚು ಮೊತ್ತದ ಅಕ್ಕಿ, ಬೇಳೆಕಾಳುಗಳು ಹಾಗೂ ಸ್ಟೀಲ್ ಪಾತ್ರೆಗಳನ್ನು ಹೊರೆಕಾಣಿಕೆಯ ರೂಪದಲ್ಲಿ ಉಡುಪಿಗೆ ಸಮರ್ಪಿಸಲಾಯಿತು. ಕರಂಗಲ್ಪಾಡಿಯ ಶ್ರೀ ಪ್ರಸನ್ನ ಭಟ್ ಅವರು ಈ ಹೊರೆಕಾಣಿಕೆ ಸಾಗಾಟಕ್ಕೆ ವಾಹನದ ವ್ಯವಸ್ಥೆ ಕಲ್ಪಿಸಿದ್ದರು.

**12. ಉಡುಪಿ ಪರ್ಯಾಯದಲ್ಲಿ ಅನ್ನಪ್ರಸಾದ ಸೇವೆ (18–01–2026)**

ಉಡುಪಿಯ ಶಿರೂರು ಮಠದ ಪರ್ಯಾಯ ಮಹೋತ್ಸವದ ಶುಭದಿನದಂದು ನಮ್ಮ ಶಿವಳ್ಳಿ ಸಭಾದ ಹಲವು ಸದಸ್ಯರು ಉಡುಪಿಯಲ್ಲಿ ಭಕ್ತಾದಿಗಳಿಗೆ ಅನ್ನಪ್ರಸಾದ ಬಡಿಸುವ ಸೇವೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಕೃತಾರ್ಥರಾದರು.

**13. ಡಿಜಿಟಲ್ ಸದಸ್ಯತ್ವ ಅಭಿಯಾನ (08–02–2026)**

ಸಂಘದ ಸದಸ್ಯತ್ವ ಅಭಿಯಾನವು, ದಿನಾಂಕ 08–02–2026ರಂದು ಯೋಗೀಶ್ ಅವರು ಅಭಿವೃದ್ಧಿಪಡಿಸಿದ ಮೊಬೈಲ್ ಆ್ಯಪ್ (App) ಮೂಲಕ ವೇಗ ಪಡೆದುಕೊಂಡಿತು. ಮಾರ್ಚ್ ಅಂತ್ಯದ ವೇಳೆಗೆ 650ಕ್ಕೂ ಹೆಚ್ಚು ಜನರು ಸದಸ್ಯರಾಗಿದ್ದರು. ಪ್ರಸ್ತುತ ಸದಸ್ಯರ ಸಂಖ್ಯೆ 850 ದಾಟಿದ್ದು, ಶೀಘ್ರದಲ್ಲಿಯೇ ಈ ಸಂಖ್ಯೆ 1000ಕ್ಕೇರುವ ನಿರೀಕ್ಷೆಯಿದೆ.

**14. ಕಟೀಲು ವಲಯ ಉದ್ಘಾಟನೆ ಹಾಗೂ ಮಧ್ವ ನವಮಿ ಭಾಷಣ ಸ್ಪರ್ಧೆ (20–02–2026)**

ಮಧ್ವ ನವಮಿ ಪ್ರಯುಕ್ತ ಶ್ರೀ ಮಧ್ವಾಚಾರ್ಯರ ಕುರಿತು ಮಕ್ಕಳಲ್ಲಿ ಅರಿವು ಮೂಡಿಸುವ ಸಲುವಾಗಿ ವಿದ್ಯಾರ್ಥಿಗಳಿಗೆ ಮೂರು ವಿಭಾಗಗಳಲ್ಲಿ 'ವಿಡಿಯೋ ರೆಕಾರ್ಡಿಂಗ್ ಭಾಷಣ ಸ್ಪರ್ಧೆ'ಯನ್ನು ಏರ್ಪಡಿಸಲಾಗಿತ್ತು. ದಿನಾಂಕ 20–02–2026ರಂದು ಶಿವಳ್ಳಿ ಸಭಾ ಕಟೀಲು ವಲಯವು ಉದಯವಾದ ಶುಭದಿನದಂದು, ಕಟೀಲು ಕ್ಷೇತ್ರದಲ್ಲಿ ಆಸ್ರಣ್ಣರ ದಿವ್ಯ ಹಸ್ತದಿಂದ ವಿಜೇತ ಮಕ್ಕಳಿಗೆ ಬಹುಮಾನಗಳನ್ನು ವಿತರಿಸಲಾಯಿತು.

**15. ಪಲಿಮಾರು ಶ್ರೀಗಳಿಗೆ ಮುಷ್ಟಿ ಕಾಣಿಕೆ ಸಮರ್ಪಣೆ (19–05–2026)***

ಕಾವೂರು ರಾಘವೇಂದ್ರ ಮಠದಲ್ಲಿ ಪಲಿಮಾರು ಶ್ರೀಗಳ ಪಟ್ಟದ ದೇವರಿಗೆ ನಾಣ್ಯದಲ್ಲಿ ತುಲಾಭಾರ **ಸೇವೆಯ ಬಾಬ್ತು, ಸದಸ್ಯರ ಮುಷ್ಟಿ ಕಾಣಿಕೆ ಮೂಲಕ ರೂ. 25,000/– ಸಮರ್ಪಿಸಲಾಯಿತು.**

**16. ದ್ವಿತೀಯ ವಸಂತ ವೇದ ಶಿಬಿರದ ಸಮಾರೋಪ, ವಾರ್ಷಿಕೋತ್ಸವ ಹಾಗೂ 'ಶಿವಳ್ಳಿ ರತ್ನ' ಪ್ರದಾನ (24–05–2026)***

ಕಾವೂರಿನ ಶ್ರೀ ರಾಘವೇಂದ್ರ ಮಠದಲ್ಲಿ 10–05–2026 ರಿಂದ 24–05–2026ರವರೆಗೆ ಪಲಿಮಾರು ಮಠದ ಉಭಯ ಶ್ರೀಪಾದರ ಆಶೀರ್ವಾದದೊಂದಿಗೆ ನಡೆದ 15 ದಿನಗಳ ವಸಂತ ವೇದ ಶಿಬಿರದ ಸಮಾರೋಪ, ಶಿವಳ್ಳಿ ಸಭಾದ ವಾರ್ಷಿಕೋತ್ಸವ ಹಾಗೂ 'ಶಿವಳ್ಳಿ ರತ್ನ' ಪ್ರಶಸ್ತಿ ಪ್ರದಾನ ಸಮಾರಂಭವು 24–05–2026ರಂದು ವಿಜೃಂಭಣೆಯಿಂದ ಸಂಪನ್ನಗೊಂಡಿತು.

ಬೆಳಿಗ್ಗೆ 11 ಗಂಟೆಗೆ ಪ್ರಾರಂಭಗೊಂಡ ಕಾರ್ಯಕ್ರಮದಲ್ಲಿ ವೇದ ಶಿಬಿರಾರ್ಥಿಗಳಿಂದ ಶ್ರೀ ವಿಷ್ಣು ಸಹಸ್ರನಾಮ ಪಾರಾಯಣ, ಚಂಡೆ ಬಡಿತ, ಸಂಸ್ಕೃತದಲ್ಲಿ ಕಿರುನಾಟಕ, ವಿವಿಧ ಶ್ಲೋಕಗಳು, ಭಜನೆ ಹಾಗೂ ಕುಣಿತ ಭಜನೆಗಳ ಅದ್ಭುತ ಪ್ರತಿಭಾ ಪ್ರದರ್ಶನ ಜರುಗಿತು. ಸಂಧ್ಯಾವಂದನೆ, ಪೂಜೆ, ವೇದ, ಲಕ್ಷ್ಮೀ ಶೋಭಾನೆ, ಕಸೂತಿ ಕಲೆ, ವೇದಗಣಿತ ಹಾಗೂ ಜ್ಯೋತಿಷ್ಯ ಮೊದಲಾದ ವಿದ್ಯೆಗಳನ್ನು ಮಕ್ಕಳಿಗೆ ಕಲಿಸಲಾಗಿತ್ತು. ಮಧ್ಯಾಹ್ನ ಊಟದ ಬಳಿಕ ಸದಸ್ಯರು ವಿನೋದಾವಳಿಗಳ ಮೂಲಕ ಜನರನ್ನು ರಂಜಿಸಿದರು.

ಸಭಾ ಕಾರ್ಯಕ್ರಮದಲ್ಲಿ ಶಾರದಾ ವಿದ್ಯಾಲಯದ ಮುಖ್ಯಸ್ಥರಾದ ಶ್ರೀ ಎಂ. ಬಿ. ಪುರಾಣಿಕ್ ಹಾಗೂ ಕಟೀಲು ದೇವಸ್ಥಾನದ ಶ್ರೀ ವೆಂಕಟರಮಣ ಆಸ್ರಣ್ಣ ಅಭ್ಯಾಗತರಾಗಿದ್ದರು. ಸಂಪನ್ಮೂಲ ವ್ಯಕ್ತಿಗಳನ್ನು ಸನ್ಮಾನಿಸಲಾಯಿತು ಹಾಗೂ ಸಾಧನೆಗೈದ 7 ಮಂದಿ ಹಿರಿಯರನ್ನು 'ಶಿವಳ್ಳಿ ರತ್ನ' ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಯಿತು. ದೇರೆಬೈಲಿನ ಶ್ರೀ ನವೀನ್ ಚಂದ್ರ ಭಟ್ ಅವರು ಎಲ್ಲಾ ಶಿಬಿರಾರ್ಥಿಗಳಿಗೆ ಉಚಿತ ಬ್ಯಾಗ್, ಪುಸ್ತಕ, ಪೆನ್ ಹಾಗೂ ಶ್ಲೋಕಪುಸ್ತಕಗಳನ್ನು ವಿತರಿಸಿದರು. ಅಧ್ಯಕ್ಷ ಶ್ರೀ ಉದಯಶಂಕರ್ ಸ್ವಾಗತಿಸಿದರು, ಕಾರ್ಯದರ್ಶಿ ಭಾಸ್ಕರ್ ಭಟ್ ಧನ್ಯವಾದ ಸಲ್ಲಿಸಿದರು.

**17. ವಸಂತ ವೇದ ಶಿಬಿರದ ಶೈಕ್ಷಣಿಕ ಪ್ರವಾಸ (10–05–2026)***

ವೇದ ಶಿಬಿರಾರ್ಥಿಗಳನ್ನು ಪವಿತ್ರ ಕ್ಷೇತ್ರವಾದ ಪಾಜಕ, ನೀಲಾವರದ ಗೋಶಾಲೆ, ಉಡುಪಿ ಶ್ರೀ ಕೃಷ್ಣ ಮಠ ಹಾಗೂ ಮಣಿಪಾಲದ ಪ್ಲಾನೆಟೋರಿಯಂಗೆ ಒಂದು ದಿನದ ಶೈಕ್ಷಣಿಕ ಪ್ರವಾಸಕ್ಕೆ ಕರೆದೊಯ್ಯಲಾಗಿತ್ತು.

**18. ಕಟೀಲು ವಲಯದಲ್ಲಿ ಪ್ರತಿಭಾ ಪುರಸ್ಕಾರ ಹಾಗೂ ಗುರುವಂದನಾ ಕಾರ್ಯಕ್ರಮ (21–06–2026)***

ದಿನಾಂಕ 21–06–2026ರಂದು ಕಟೀಲಿನ ಪದವಿ ಪೂರ್ವ ಕಾಲೇಜಿನ ಭಾರತೀಯ ಸಭಾಭವನದಲ್ಲಿ ಶಿವಳ್ಳಿ ಸಭಾ (ರಿ.) ವತಿಯಿಂದ 'ಪ್ರತಿಭಾ ಪುರಸ್ಕಾರ ಹಾಗೂ ಗುರುವಂದನಾ' ಕಾರ್ಯಕ್ರಮ ಜರುಗಿತು.

ಅಭ್ಯಾಗತರಾಗಿ ಕಟೀಲು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಅನುವಂಶಿಕ ಅರ್ಚಕರಾದ ಶ್ರೀ ಹರಿ ನಾರಾಯಣದಾಸ ಆಸ್ರಣ್ಣ, ಜಿಲ್ಲಾ ಧಾರ್ಮಿಕ ಪರಿಷತ್ ಸದಸ್ಯರಾದ ಶ್ರೀ ಸುಬ್ರಹ್ಮಣ್ಯ ಕೊರಿಯರ್, ಬಲ್ಮಠದ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ನಿವೃತ್ತ ಪ್ರಾಂಶುಪಾಲರಾದ ಪ್ರೊ. ಜಗದೀಶ ರಾವ್ ಬಾಳ ಹಾಗೂ ಶ್ರೀನಿವಾಸ ಯುನಿವರ್ಸಿಟಿಯ ರಿಸರ್ಚ್ ಪ್ರೊಫೆಸರ್ ಶ್ರೀಮತಿ ಸುಧಾ ಕೆ. ಅವರು ಆಗಮಿಸಿದ್ದರು.

ಮೊದಲಿಗೆ ಅಧ್ಯಕ್ಷರಾದ ಶ್ರೀ ಉದಯಶಂಕರ ಅವರು ಪ್ರತಿಭಾ ಪುರಸ್ಕಾರದ ಬಗ್ಗೆ ವಿವರಿಸಿ, ಸಂಘದ ಧ್ಯೇಯೋದ್ದೇಶಗಳನ್ನು ತಿಳಿಸಿದರು.

**19. ಪ್ರತಿಭಾ ಪುರಸ್ಕಾರ:**

10ನೇ ಹಾಗೂ 12ನೇ ತರಗತಿಯ ಸುಮಾರು 38 ವಿದ್ಯಾರ್ಥಿಗಳಿಗೆ ಶಾಲು ಹೊದಿಸಿ, ಸ್ಮರಣಿಕೆ ನೀಡಿ, ತಲಾ ಮೂರು ಸಾವಿರ ರೂಪಾಯಿಗಳ ( 3,000) ಪ್ರೋತ್ಸಾಹ ಧನವನ್ನು ನೀಡಿ ಸನ್ಮಾನಿಸಲಾಯಿತು (ಪ್ರತಿಭಾ ಪುರಸ್ಕಾರ ನಿರ್ವಹಣೆ: ಸಂಚಾಲಕರಾದ ಶ್ರೀ ಗಣೇಶ ಹೆಬ್ಬಾರ್ ಹಾಗೂ ಜೊತೆ ಕಾರ್ಯದರ್ಶಿ ರವೀಶ್ ನಾರ್ಷ).

**20. ಗುರುವಂದನೆ:**

ತಲಪಾಡಿಯ ಶ್ರೀ ರಾಮರಾವ್ ಹಾಗೂ ಕುಡುಪುವಿನ ಶ್ರೀಮತಿ ಶೋಭಾ ಟೀಚರ್ ಅವರನ್ನು ಶಾಲು ಹಾಕಿ, ಪೇಟ ತೊಡಿಸಿ, ಸ್ಮರಣಿಕೆ ನೀಡಿ ಸನ್ಮಾನಿಸಲಾಯಿತು (ಪ್ರಶಸ್ತಿ ಪತ್ರ ವಾಚನ: ಶ್ರೀ ಗಿರೀಶ್ ಭಟ್).

ಕಾರ್ಯದರ್ಶಿ ಭಾಸ್ಕರ್ ಭಟ್ ಅವರು ಧನ್ಯವಾದ ತಿಳಿಸಿದರು. ಈ ಇಡೀ ಕಾರ್ಯಕ್ರಮದ ನಿರೂಪಣೆಯನ್ನು ಶ್ರೀಮತಿ ಚಂದ್ರಿಕಾ ಸುರೇಶ್ ಅವರು ನೆರವೇರಿಸಿದರು.

**ವಂದನಾರ್ಪಣೆ:**

ಕಾರ್ಯದರ್ಶಿಯಾಗಿ ನನ್ನ ಜವಾಬ್ದಾರಿಯನ್ನು ನಿಷ್ಠೆಯಿಂದ ನಿರ್ವಹಿಸುವಲ್ಲಿ ಸರ್ವ ಸಹಕಾರ ನೀಡಿದ ಅಧ್ಯಕ್ಷರಾದ ಶ್ರೀ ಉದಯಶಂಕರ್, ಕೋಶಾಧಿಕಾರಿ ಶ್ರೀ ಪ್ರಸನ್ನ ರಾವ್, ಸಂಚಾಲಕರಾದ ಶ್ರೀ ಗಣೇಶ ಹೆಬ್ಬಾರ್, ಎಲ್ಲಾ ಪದಾಧಿಕಾರಿಗಳು ಹಾಗೂ ಚುನಾಯಿತ ಆಡಳಿತ ಮಂಡಳಿ ಸದಸ್ಯರಿಗೆ ನನ್ನ ತುಂಬು ಹೃದಯದ ಧನ್ಯವಾದಗಳು.

ಹಾಗೆಯೇ, ನಮ್ಮೆಲ್ಲಾ ಕಾರ್ಯಕ್ರಮಗಳೂ ಯಶಸ್ವಿಯಾಗಲು ತನು–ಮನ–ಧನಗಳಿಂದ ಪ್ರೋತ್ಸಾಹಿಸುತ್ತಿರುವ ಸಮಸ್ತ ಶಿವಳ್ಳಿ ಬಾಂಧವರಿಗೂ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

**ಕಾರ್ಯದರ್ಶಿ**
**ಶಿವಳ್ಳಿ ಸಭಾ (ರಿ.) ಮಂಗಳೂರು**

# SHIVALLI SABHA (R)

Regn No.DRDK/SOR/84/2025-26 dt 03-09-2025, Sri Harsha,Tailory Road,
Opp Jyothi Garage, Mulihithlu, Mangalore 575001

## BALANCE SHEET AS AT 31st MARCH 2026

(Commencement on 03-09-2025)

| CAPITAL & LIABILITIES | | As at 31-03-2026 Rs. Ps. | PROPERTIES & ASSETS | | As at 31-03-2026 Rs. Ps. |
|---|---|---|---|---|---|
| **General Fund :** | | | **Deposits :** | | |
| Opening Balance | - | | FD with Karnataka Bank,PM Rao Rd Br | | 6,03,110.00 |
| Add : | | | (incl accr interest) | | |
| Excess of Income | | | | | |
| over Expenditure | 8,76,256.00 | | **Cash and Bank Balances:** | | |
| (trasfd from I & E a/c) | | 8,76,256.00 | Cash-in-hand | 2,44,188.00 | |
| | | | Karnataka Bank,PM Rao Rd Br | | |
| **Current Liabilities & Provisions :** | | | SB A/c 495252500012601 | 50,998.00 | 2,95,186.00 |
| Accounting Charges payable | | 10,000.00 | | | |
| Audit Fees payable | | 11,800.00 | | | |
| Membership fees advance/suspense | | 240.00 | | | |
| **TOTAL** | | **8,98,296.00** | **TOTAL** | | **8,98,296.00** |

Place: Mangalore
Date : 12-09-2026

As per our Report of even date
and Notes on Accounts,

For **SHIVALLI SABHA (R),**

For **ANANTHA & CO.,**
Chartered Accountants (FRN 006978S)

| Sd/- | Sd/- | Sd/- | Sd/- |
|---|---|---|---|
| B.Udayashankar (President) | Bhaskar Bhat K.V. (Secretary) | Prasanna Rao K. (Treasurer) | CA. Anantha Padmanabha K. Proprietor (Mem No 204087) UDIN : 26204087FCRHYL8619 |

# SHIVALLI SABHA (R)

Regn No.DRDK/SOR/84/2025-26 dt 03-09-2025, Sri Harsha,Tailory Road,
Opp Jyothi Garage, Mulihithlu, Mangalore 575001

## INCOME AND EXPENDITURE ACCOUNT FOR THE PERIOD ENDED 31st MARCH 2026

(Commencement on 03-09-2025)

| **Particulars - Expenditures** | Period ended 31-03-2026 Rs. Ps. | **Particulars - Income** | | Period ended 31-03-2026 Rs. Ps. |
|---|---|---|---|---|
| To Chandika Yaaga expenses | 1,55,901.00 | By Membership fees received | | 44,940.00 |
| To Blood Donation Camp expenses | 19,325.00 | By Contributions from Members for | | |
| To Prathibha Puraskara Program expenses | 1,77,322.00 | Sangha's Activities/Programs : | | |
| To Calender Expenses | 54,062.00 | Chandika Yaaga | 6,95,695.00 | |
| To Guru Kaanike Expenses | 81,120.00 | Blood donation Camp | 17,201.00 | |
| To Sports (Kreedotsava) Expenses | 1,88,889.00 | Prathibha Puraskara | 2,68,764.00 | |
| To Paryaya Horekanike Expenses | 77,438.00 | Calender subscriptions recd | 97,000.00 | |
| To Accounting Charges | 10,000.00 | Guru Kaanike Contribution | 1,14,682.00 | |
| To Audit Fees | 11,800.00 | Sports (Kreedotsava) | 3,58,060.00 | |
| To Printing, Stationery & Xerox Expenses | 20,440.00 | Paryaya Horekanike Contribution | 55,507.00 | 16,06,909.00 |
| To Registration Charges | 11,600.00 | Valaya Activities/Programs : | | |
| To Valaya activities/program expenses: | | Derebail-Aati Koota,Deepavali, | | |
| Derebail-Aati Koota,Deepavali, | | Kunkumarchane,Prathibha Puraskara | 1,36,112.00 | |
| Kunkumarchane,Prathibha Puraskara | 1,33,630.00 | Kadri- Vasantha Utsava | 13,056.00 | |
| Kadri- Vasantha Utsava | 13,056.00 | Kudupu- Aati Koota | 10,500.00 | |
| Kudupu- Aati Koota | 7,360.00 | Mangaladevi- Aati Koota | 13,400.00 | |
| Mangaladevi- Aati Koota | 13,400.00 | Surathkal- Aati Koota | 9,000.00 | |
| Surathkal- Aati Koota | 7,210.00 | Talapady-Satyanarayana Pooja, | | |
| Talapady-Satyanarayana Pooja, | | Shikshakara Dinacharane,Upakarma | 36,248.00 | |
| Shikshakara Dinacharane,Upakarma | 19,703.00 | Misc Receipts | 23.00 | 2,18,339.00 |
| To Excess of Income over Expenditures | 8,76,256.00 | By Bank interest : | | |
| (Transfrd to General Fund -Bal.Sheet) | | Interest on Bank Fixed Deposit A/c | 3,110.00 | |
| | | Interest on Savings Bank A/c | 5,214.00 | 8,324.00 |
| **TOTAL** | **18,78,512.00** | **TOTAL** | | **18,78,512.00** |

Place: Mangalore
Date : 12-09-2026

As per our Report of even date
and Notes on Accounts,

For **SHIVALLI SABHA (R),**

For **ANANTHA & CO.,**
Chartered Accountants (FRN 006978S)

| Sd/- | Sd/- | Sd/- | Sd/- |
|---|---|---|---|
| B.Udayashankar (President) | Bhaskar Bhat K.V. (Secretary) | Prasanna Rao K. (Treasurer) | CA. Anantha Padmanabha K. Proprietor (Mem No 204087) |